ದೇವರಾಜ ಅರಸ್ ಜನ್ಮಶತಮಾನೋತ್ಸವ

436(1043); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯ ಕಂಡ ಅಪ್ರತಿಮ ರಾಜಕಾರಣಿ, ಹಿಂದುಳಿದ ವರ್ಗಗಳ ನೇತಾರರಾಗಿದ್ದ ಅರಸು ಅವರ ಜನ್ಮ ಶತಮಾನೋತ್ಸವವನ್ನು ಯಾವ ರೀತಿ ಆಚರಿಸಲು ನಿರ್ಧರಿಸಲಾಗಿದೆ; ಅವರ ಹುಟ್ಟಿದ ದಿನವಾದ 2015ರ ಆಗಸ್ಟ್ 20 ರಂದು ಯಾವ ರೀತಿ ಆಚರಣೆ ಮಾಡಲಾಗುವುದು (ವಿವರ ನೀಡುವುದು);

ಆ) ಹಿಂದುಳಿದ ಯಾವುದಾದರೂ ಜಿಲ್ಲೆಯಲ್ಲಿ ದೇವರಾಜ್ ಅರಸು ಅವರ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸುವ ಉದ್ದೇಶ ಸರಕಾರಕ್ಕೆ ಇದೆಯೇ (ವಿವರ ಒದಗಿಸುವುದು);

ಇ) ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸರಕಾರದಿಂದ ನೀಡಲಾಗುವ ಪ್ರತಿಭಾವೇತನವನ್ನು ದೇವರಾಜ್ ಅರಸು ಅವರ ಹೆಸರಿನಲ್ಲಿ ನೀಡವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ದೇವರಾಜ ಅರಸು ಅವರ ಹುಟ್ಟೂರಿನಲ್ಲಿ ಅವರ ಬಳಕೆ ವಸ್ತುಗಳು, ನೆನಪಿನ ವಸ್ತುಗಳನ್ನೆಲ್ಲಾ ಸಂಗ್ರಹಿಸಿ ಒಂದು ಪ್ರತ್ಯೇಕ ಮ್ಯೂಸಿಯಂ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖ ವತಿಯಿಂದ ಡಿ.ದೇವರಾಜ ಅರಸುರವರ ಜನ್ಮ ಶತಮಾನೋತ್ಸವ ಕಾರ್ಯಕ್ರಮಕ್ಕೆ ಕ್ರಿಯಾಯೋಜನೆಯನ್ನು ರೂಪಿಸಿ ವಿಜ್ರಂಭಣೆಯಿಂದ ಆಚರಣೆ ಮಾಡಲಾಗುವುದು.

ಆ) ಇಲ್ಲ

ಇ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸಲ್ಲಿಸಿರುವ 2015–16ನೇ ಸಾಲಿನ ಆಯವ್ಯಯದ ಬೇಡಿಕೆಯಲ್ಲಿ ದೇವರಾಜ ಅರಸು ಅವರ ಹೆಸರಿನಲ್ಲಿ ಪ್ರತಿಭಾ ವೇತನವನ್ನು ಘೋಷಿಸಲು ಪರಿಶೀಲಿಸಲಾಗುತ್ತಿದೆ.

ಈ) ಇಲ್ಲ

ರಾಜ್ಯದಲ್ಲಿ ಔಷಧ ಪೂರೈಕೆ

437(1044); ಶ್ರೀ ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯದಲ್ಲಿ ಸಾರ್ವತ್ರಿಕ ಔಷಧ ಪೂರೈಕೆ ಪ್ರತಿ ಜಿಲ್ಲೆಗೂ ಆಗುತ್ತಿದೆಯೇ (ವಿವರ ನೀಡುವುದು)

ಆ) ರಾಜ್ಯದಲ್ಲಿ ಯಾವ್ಯಾವ ಆಸ್ಪತ್ರೆಗಳ ಮೂಲಕ ಜಿಲ್ಲಾ ಆಸ್ಪತ್ರೆಗಳಿಗೆ ಔಷಧಿಗಳನ್ನು ಪೂರೈಸಲಾಗುತ್ತಿದೆ, ಕಂಪನಿಯ ಹೆಸರು ಮತ್ತು ಅವರು ವಿತರಿಸುತ್ತಿರುವ ಔಷಧದ ವಿವರ ನೀಡುವುದು?

ಇ) ಕಳೆದ ಎರಡು ವರ್ಷಗಳಲ್ಲಿ ಈ ಕಂಪನಿಗಳಿಗೆ ಸರಕಾರದಿಂದ ನೀಡಲಾದ ಮೊತ್ತ ಎಷ್ಟು, ಕಂಪನಿಗಳ ಆಯ್ಕೆ ಪಾರದರ್ಶಕವಾಗಿ ಇದೆಯೇ (ವಿವರ ನೀಡುವುದು)

ಈ) ಕಂಪನಿಗಳಿಂದ ಔಷಧ ಪೂರೈಕೆ ಸಮರ್ಪಕವಾಗಿ ಆಗುತ್ತಿಲ್ಲ ಅನ್ನುವ ಆರೋಪ ಸರಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ, ಅದರ ವಿರುದ್ಧ ಕೈಗೊಂಡ ಕ್ರಮ ಏನು?

ಉ) ಔಷಧ ನೀಡಿಕೆಯ ಪರವಾನಗೆ, ಅದರ ಆಯ್ಕೆಯ ಮಾನದಂಡ, ವಿತರಣೆಯ ಸ್ವರೂಪ ಕುರಿತು ಸಮಗ್ರ ಹಾಗೂ ಸ್ಪಷ್ಟ ಮಾಹಿತಿಯನ್ನು ದಾಖಲೆ ಸಮೇತ ನೀಡುವುದು?